

ಕೇವಲ ಎರಡು ಚಕ್ರಕ್ಕೆ ಎಂಜಿನ್ ಸಂಪರ್ಕವಿರುವ ಜೀಪ್‌ಅನ್ನು ಚಲಾಯಿಸುತ್ತಾರೆ. (ಟೂ ವ್ಹೀಲ್ ವಾಹನವೆಂದರೆ ವಾಹನದ ಎಂಜಿನ್ ಸಂಪರ್ಕ ಕೇವಲ ಮುಂದಿನ ಚಕ್ರಗಳಿಗಷ್ಟೇ ಇದ್ದು ಹಿಂದಿನ ಚಕ್ರಗಳು ಮುಂದಿನ ಚಕ್ರಗಳನ್ನು ಅನುಸರಿಸಿಕೊಂಡು ಚಲಿಸುತ್ತವೆ. ಆದರೆ ನಾಲ್ಕು ವ್ಹೀಲ್ ವಾಹನಗಳು ಹೆಚ್ಚು ಬಲಶಾಲಿಯಾಗಿದ್ದು, ವಾಹನದ ಎಂಜಿನ್‌ನ ಸಂಪರ್ಕ ನಾಲ್ಕೂ ಚಕ್ರಗಳಿಗಿದ್ದು ಎಂತಹ ಕಠಿಣ ರಸ್ತೆಗಳಲ್ಲಿಯೂ ಸ್ವಲ್ಪವೂ ಜಾರದಂತೆ ಚಾಲಕ ವಾಹನವನ್ನು ಚಲಾಯಿಸಿದಂತೆಯೇ ಚಲಿಸುತ್ತದೆ. ಇವುಗಳನ್ನು ವಿಶೇಷವಾಗಿ ಸೈನ್ಯದಲ್ಲಿ ಮತ್ತು ಡರ್ಟ್ ರೇಸ್‌ಗಳಲ್ಲಿ ಬಳಸುತ್ತಾರೆ.

ಕರ್ನಾಟಕ ರಾಜ್ಯ ನೊಂದಣಿಯ ಎಲ್ಲಾ ವಾಹನಗಳು ಕೊಡಚಾದ್ರಿಯ ಶೃಂಗಕ್ಕೆ ಹೋಗಲು ಅನುಮತಿ ಇದೆ. ಆದರೆ ಇಲ್ಲಿನ ಕಡಿದಾದ ಏರು ತಗ್ಗುಗಳ ರಸ್ತೆ, ಅಪಾಯಕಾರಿ ತಿರುವುಗಳು, ಪ್ರಪಾತಗಳ ಕಾರಣದಿಂದ ಮತ್ತು ಕೇವಲ ಒಂದು ಜೀಪ್ ಮಾತ್ರ ಸಾಗಬಹುದಾದ ಕಿರಿದಾದ ರಸ್ತೆಯಲ್ಲಿ ವೇಗವಾಗಿ ಎದುರುಗಡೆಯಿಂದಲೂ ಜೀಪ್‌ಗಳು ಬರುವ ಸಂದರ್ಭಗಳಲ್ಲಿ ಚಾಲಕ ನಿಯಂತ್ರಣ ಕಳೆದುಕೊಳ್ಳುವ ಸಾಧ್ಯತೆಯೂ ಇರುವುದರಿಂದ ಸಾಮಾನ್ಯ ಚಾಲಕರು ತಮ್ಮ ವಾಹನವನ್ನು ಇಲ್ಲಿನ ರಸ್ತೆಯಲ್ಲಿ ಚಲಾಯಿಸುವ ಧೈರ್ಯ ಮಾಡುವುದಿಲ್ಲ. ಇಲ್ಲಿನ ರಸ್ತೆಗಳಲ್ಲಿ ಬಹುತೇಕ ಮಹಿಂದ್ರಾ ಜೀಪ್‌ಗಳೇ ಓಡಾಡುತ್ತವೆ. ಕಮಾಂಡರ್ ಮಾದರಿಯ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ಸಾಗಿಸುವ ಜೀಪ್‌ಗಳೂ ಈ ರಸ್ತೆಯಲ್ಲಿ ಓಡಾಟ ನಡೆಸುವುದು ಅದ್ಭುತವೇ ಸರಿ. ಸಾಮಾನ್ಯವಾಗಿ 8 ರಿಂದ 9 ಮಂದಿ ಪ್ರವಾಸಿಗರನ್ನು ಜೀಪ್‌ನಲ್ಲಿ ಕರೆದುಕೊಂಡು ಹೋಗಲಾಗುತ್ತದೆ. ಆದರೆ ಕಮಾಂಡರ್ ಮಾದರಿಯ ಜೀಪ್‌ನಲ್ಲಿ 10 ರಿಂದ 12 ಮಂದಿಯನ್ನು ಸಾಗಿಸಲಾಗುತ್ತದೆ. ಎಂಟು ಮಂದಿಯ ತಂಡವೊಂದಕ್ಕೆ ರೂ.2,800/– ಪ್ರಯಾಣ ಶುಲ್ಕ, ಎಂಟಕ್ಕಿಂತ ಹೆಚ್ಚಿನ ಪ್ರಯಾಣಿಕರಿದ್ದಲ್ಲಿ ಪ್ರತಿಯೊಬ್ಬರಿಗೂ ತಲಾ ರೂ. 350/– ರಂತೆ ಹೆಚ್ಚುವರಿ ಶುಲ್ಕ. ತಂಡದಲ್ಲಿ ಕೇವಲ ಎರಡು ಅಥವಾ ಮೂರು ಮಂದಿ ಇದ್ದು, ಬಾಡಿಗೆಗೆ ಗೊತ್ತುಪಡಿಸಿಕೊಂಡು ತೆರಳುವುದಾದರೆ ರೂ. 2,800/– ಪಾವತಿಸಿ ಹಾಗೂ ಹಂಚಿಕೆಯೊಂದಿಗೆ ತೆರಳುವುದಾದರೆ ಜೀಪ್‌ಗೆ ಕನಿಷ್ಠ 8 ಜನ ತುಂಬುವವರೆಗೂ ಕಾದು ತಲಾ ರೂ. 350/– ಪಾವತಿಸಿಯೂ ಪ್ರಯಾಣ ಮಾಡಬಹುದಾಗಿದೆ.

ಕೊಲ್ಲೂರು ಒಂದರಿಂದಲೇ ಸುಮಾರು 120 ಜೀಪ್‌ಗಳು ಗಿರಿಯೆಡೆಗೆ ಸಾಗುತ್ತವೆ. ಪ್ರತೀ ಜೀಪ್‌ಗಳಿಗೂ ಸರದಿಯ ನಂಬರ್ ನೀಡಲಾಗುತ್ತಿದ್ದು, ಇದರಂತೆ ಜೀಪ್‌ಗಳು ಪ್ರಯಾಣಿಕರನ್ನು ಹೊತ್ತು ಸಾಗುತ್ತವೆ. ಸೀಸನ್‌ಗಳ ಸಂದರ್ಭದಲ್ಲಿ ದಿನಕ್ಕೆ ಎರಡು ಟ್ರಿಪ್‌ಗಳು ಹಾಗೂ ಸಾಮಾನ್ಯ ದಿನಗಳಲ್ಲಿ ವಾರಕ್ಕೆ 2 ರಿಂದ 3 ಟ್ರಿಪ್‌ಗಳು ಒಂದೊಂದು ಜೀಪ್‌ಗೆ ದೊರೆಯುತ್ತವೆ.

ಜೀಪ್‌ಗಳು ಕೊಲ್ಲೂರು, ನಿಟ್ಟೂರು ಮತ್ತು ಹೊಸನಗರದಿಂದ ಪ್ರವಾಸಿಗರನ್ನು ಹೊತ್ತುಕೊಂಡು ಕೊಡಚಾದ್ರಿಯ ದೇವಸ್ಥಾನದವರೆಗೂ ಸಾಗುತ್ತವೆ. ಇಲ್ಲಿ ಪ್ರಯಾಣಿಕರನ್ನು ಇಳಿಸಿದ ನಂತರ ಜೀಪ್‌ಗಳು ಎರಡರಿಂದ ಎರಡೂವರೆ ಗಂಟೆಗಳ ಸಮಯ ವಾಪಸ್ಸು ಪ್ರಯಾಣಿಕರನ್ನು ಹೊತ್ತೊಯ್ಯಲು ಕಾಯುತ್ತವೆ. ಇಲ್ಲಿ ಚಾರಣಿಗರು ರಾತ್ರಿಯ ಹೊತ್ತು ಕ್ಯಾಂಪ್‌ಫೈರ್ ಹಾಕಿಕೊಂಡು ಅಥವಾ ಅರಣ್ಯ ಇಲಾಖೆಯು 8 ಕೊಠಡಿಗಳನ್ನು ನಿರ್ಮಿಸಿದ್ದು ಈ ನಿರೀಕ್ಷಣಾ ಮಂದಿರಗಳಲ್ಲಿ ಮುಂಗಡ ಗೊತ್ತುಪಡಿಸಿಕೊಂಡು ಉಳಿದುಕೊಳ್ಳಬಹುದು.

ಆದರೆ ಯಾವುದೇ ಕಾರಣಕ್ಕೂ ಜೀಪ್‌ಗಳು ರಾತ್ರಿಯ ಹೊತ್ತು ಗಿರಿಯಲ್ಲಿ ಉಳಿದುಕೊಳ್ಳುವಂತಿಲ್ಲ ಹಾಗೂ ಅರಣ್ಯ ಇಲಾಖೆ ಇದಕ್ಕೆ ಅವಕಾಶವನ್ನೂ

